ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 12–12–2019

# ಪತ್ರಿಕಾ ಆಮಂತ್ರಣ

**1.** ಕೃಷಿ ಬೆಲೆ ಆಯೋಗ ವತಿಯಿಂದ "ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ (ಪಿಎಂಎಫ್‌ಬಿವೈ) ಸಾಧನೆ ಮತ್ತು ಸವಾಲುಗಳು: ಕುರಿತಂತೆ ರಾಷ್ಟ್ರಮಟ್ಟದ ಕಾರ್ಯಗಾರ.

ಉದ್ಘಾಟನೆ:

ಶ್ರೀ ಜೆ.ಸಿ. ಮಾಧುಸ್ವಾಮಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು.

ಅಧ್ಯಕ್ಷತೆ:

ಶ್ರೀ ಹನುಮನಗೌಡ ಬೆಳಗುರ್ಕಿ,
ಅಧ್ಯಕ್ಷರು,
ಕರ್ನಾಟಕ ಕೃಷಿ ಬೆಲೆ ಆಯೋಗ

ದಿನಾಂಕ:13–012–2019 ಶುಕ್ರವಾರ ಸಮಯ: 9.30 ಗಂಟೆಗೆ

**ಸ್ಥಳ: ಮಹಾತ್ಮ ಗಾಂಧಿ ಸಭಾಂಗಣ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, ಡಾ. ವಿ.ಕೆ.ಆರ್.ವಿ. ರಸ್ತೆ, ನಾಗರಭಾವಿ, ಬೆಂಗಳೂರು.**

**2.** ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ವತಿಯಿಂದ "ವಿಶ್ವ ಮಣ್ಣು ದಿನಾಚರಣೆ" ಕಾರ್ಯಕ್ರಮ:

ಉದ್ಘಾಟನೆ:

ಡಾ. ರಾಜೇಂದ್ರ ಪ್ರಸಾದ್,
ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ

**ಮುಖ್ಯ ಅತಿಥಿಗಳು:**

ಡಾ. ಎಸ್.ಜಿ. ಪಾಟೀಲ್
ಕೃಷಿ ವಿಶ್ವವಿದ್ಯಾನಿಲಯ ಧಾರವಾಡ

ಮತ್ತು

ಪ್ರೊ. ಕೆ.ಪಿ. ಚಿನ್ನಸ್ವಾಮಿ,
ನೋಡಲ್ ಅಧಿಕಾರಿ,

ಡಾ. ಎ.ಜಿ. ಶಂಕರ್, ಡೀನ್ ಸ್ನಾತಕೋತ್ತರ
ನಿವೃತ್ತ ಶಿಕ್ಷಣ ನಿರ್ದೇಶಕರಾದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ

**ಅಧ್ಯಕ್ಷತೆ:**

ಡಾ ಡಿ.ಎಲ್.ಸಾವಿತ್ರಮ್ಮ, ಡೀನ್ (ಕೃಷಿ)
ಕೃಷಿ ಮಹಾವಿದ್ಯಾನಿಲಯ,
ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು

ದಿನಾಂಕ: 13-012-2019 ಶುಕ್ರವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ನಾರ್ತ್ ಬ್ಲಾಕ್ ಸಭಾಂಗಣ, ಜಿಕೆವಿಕೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

# ಪಶುಪಾಲನಾ ಭವನ ಮತ್ತು ಪಶುವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನೂತನ ಕಟ್ಟಡಗಳ ಉದ್ಘಾಟನೆ

**ಬೆಂಗಳೂರು, ಡಿಸೆಂಬರ್ 12 (ಕರ್ನಾಟಕ ವಾರ್ತೆ**

ಪಶುಸಂಪತ್ತು ದೇಶದ ಸಂಪತ್ತು ಎಂಬ ನಾಣ್ಣುಡಿಯಂತೆ, ಕೃಷಿ ಹಾಗೂ ಪಶುಸಂಗೋಪನೆಯು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಮುಖ್ಯ ಮಂತ್ರಿ ಯಡಿಯೂರಪ್ಪನವರು ತಿಳಿಸಿದರು.

ಅವರು ಇಂದು ಬೆಂಗಳೂರಿನ ಪಶುಪಾಲನಾ ಭವನ ಹಾಗೂ ಪಶುವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನೂತನ ಕಟ್ಟಡ ಉದ್ಘಾಟನೆಯನ್ನು ಪಶು ವೈದ್ಯಕೀಯ ಮಹಾವಿದ್ಯಾಲಯದ ಆವರಣ, ಹೆಬ್ಬಾಳ, ಬೆಂಗಳೂರು ಇಲ್ಲಿ ನೆರವೇರಿಸಿ ಮಾತನಾಡುತ್ತಿದ್ದರು.

ಮುಂದುವರೆದು ಗ್ರಾಮೀಣ ಪ್ರದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪಶುಸಂಗೋಪನೆಯು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತಿದೆ ಪಶು ಸಂಗೋಪನೆ ರೈತರಿಗೆ ಪ್ರಮುಖ ಉಪ ಕಸುಬಾಗಿದ್ದು, ಆದಾಯ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದ ಅವರು ರೈತರು ತಮ್ಮ ಜೀವನೋಪಾಯಕ್ಕಾಗಿ ಕೃಷಿ ಅಲ್ಲದೆ ಕೃಷಿಯೇತರ ಚಟುವಟಿಕೆಗಳಲ್ಲಿ ಅತ್ಯಂತ ಪ್ರಮುಖವಾದ ಪಶುಸಂಗೋಪನೆಯಲ್ಲಿ ತೊಡಗುವುದರಿಂದ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಾಣಬಹುದಾಗಿದೆ.

ರಾಜ್ಯದ ಕೃಷಿ ಜಿಡಿಪಿ ಗೆ ಪಶುಸಂಗೋಪನೆಯು ಶೇಕಡ 20.07ರಷ್ಟು ಮತ್ತು ಒಟ್ಟಾರೆ ಜಿಡಿಪಿಗೆ ಶೇಕಡ 2.03 ಆಗಿದೆ. ಗ್ರಾಮೀಣ ಪ್ರದೇಶದ ಜನರು, ವ್ಯವಸಾಯ ಮತ್ತು ಪಶುಪಾಲನೆಯನ್ನೇ ಹೆಚ್ಚಾಗಿ ಅವಲಂಬಿಸಿದ್ದು, ಜಾನುವಾರು ಸಂಪತ್ತಿಗೆ ಆರೋಗ್ಯ ರಕ್ಷಣೆ ನೀಡುವುದು ಸರ್ಕಾರದ ಪ್ರಮುಖ ಕರ್ತವ್ಯ ಎಂದು ತಿಳಿಸಿದರು.

ರೈತರಿಗೆ ಹೈನುಗಾರಿಕೆ ಮತ್ತು ಪಶುಪಾಲನೆ ಕೈಗೊಳ್ಳಲು ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರ ಬದ್ಧವಾಗಿದೆ. ರಾಜ್ಯದ 8.45 ಲಕ್ಷ ಹಾಲು ಉತ್ಪಾದಕರಿಗೆ 238.12 ಕೋಟಿ ರೂ. ಪ್ರೋತ್ಸಾಹಧನ ವಿತರಿಸಲಾಗಿದೆ ಎಂದರು.

ವಲಸೆ ಕುರಿಗಾರರಿಗೆ ನೈಸರ್ಗಿಕ ವಿಕೋಪಗಳಿಂದ ರಕ್ಷಣೆ ನೀಡುವ ಕಾರ್ಯಕ್ರಮದಡಿ 1,675 ಬಡ ಸಂಚಾರಿ / ಅರೆ ಸಂಚಾರಿ ಕುರಿಗಾರರಿಗೆ 2.88 ಕೋಟಿ ರೂ. ವೆಚ್ಚದಲ್ಲಿ ಕಿಟ್‌ಗಳನ್ನು ವಿತರಿಸಲಾಗಿದೆ ಎಂದ ಮುಖ್ಯಮಂತ್ರಿ ಅವರು ಗ್ರಾಮೀಣ ಭಾಗದ 665 ನಿರುದ್ಯೋಗಿ ಯುವಕ / ಯುವತಿಯರಿಗೆ 30.61 ಲಕ್ಷ ರೂ.ಗಳ ಅನುದಾನದಲ್ಲಿ ಒಟ್ಟು 25,270 ಕೋಳಿ ಮರಿಗಳನ್ನು ವಿತರಿಸಲಾಗಿದೆ.

ಆಕಸ್ಮಿಕವಾಗಿ ಮರಣ ಹೊಂದಿದ ಕುರಿ / ಮೇಕೆಗಳ 14,798 ಮಾಲೀಕರಿಗೆ 8.55 ಕೋಟಿ ರೂ. ಪರಿಹಾರ ಧನ ನೀಡಲಾಗಿದೆ. ಬರಗಾಲ ಮತ್ತು ಅತಿವೃಷ್ಟಿ ಸಮಯದಲ್ಲಿ ಜಾನುವಾರುಗಳಿಗೆ ಮೇವು, ನೀರು ಹಾಗೂ ಸುರಕ್ಷತೆ ಒದಗಿಸುವ ನಿಟ್ಟಿನಲ್ಲಿ "ಜಾನುವಾರು ಶಿಬಿರ ನೀತಿ"ಯನ್ನು ಸಹ ಹೊರಡಿಸಲಾಗಿದೆ.

ಪ್ರಮುಖ ಜಾನುವಾರು ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಮತ್ತು ಮೊಟ್ಟೆಗಳನ್ನು ಹೆಚ್ಚು ಉತ್ಪಾದಿಸಲು ಉತ್ತೇಜನ ನೀಡುವ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸುವ ಗುರಿಯನ್ನು ಸರ್ಕಾರದ ಹೊಂದಿದೆ.

ಪಶುವೈದ್ಯಕೀಯ ಸೇವೆ ನೀಡುವ ನಿಟ್ಟಿನಲ್ಲಿ ಅಗತ್ಯ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸರ್ಕಾರ ಬದ್ಧವಾಗಿದೆ. ಇಲಾಖೆಯಲ್ಲಿ ಜಾನುವಾರುಗಳಿಗೆ ಲಸಿಕಾ ಕಾರ್ಯಕ್ರಮ, ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ, ಪಿಂಜ್ರಾಪೋಲ್ ಹಾಗೂ ಇತರೆ ಗೋಶಾಲೆಗಳಿಗೆ ನೆರವು, ಪಶುಭಾಗ್ಯ ಯೋಜನೆ,

ಕ್ಷೀರಧಾರೆ ಯೋಜನೆ, ರಾಷ್ಟ್ರೀಯ ಗೋಕುಲ ಮಿಷನ್, ಜಾನುವಾರು ವಿಮೆ ಸೇರಿದಂತೆ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ರೈತರಿಗೆ, ಪಶು ಪಾಲಕರಿಗೆ ಮತ್ತು ಸಾರ್ವಜನಿಕರಿಗೆ ತ್ವರಿತಗತಿಯಲ್ಲಿ ಹಾಗೂ ಪರಿಣಾಮಕಾರಿಯಾಗಿ ಪಶುವೈದ್ಯಕೀಯ ಸೇವೆಗಳನ್ನು ತಲುಪಿಸುವುದು ಸರ್ಕಾರದ ಗುರಿಯಾಗಿದೆ. ಈ ನಿಟ್ಟಿನಲ್ಲಿ ಪಶುಪಾಲನಾ ಭವನ ಹಾಗೂ ಪಶುವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಸರ್ಕಾರದ ಆಶಯವನ್ನು ಈಡೇರಿಸಲಿ ಎಂದು ಸಂತಸ ವ್ಯಕ್ತಪಡಿಸಿದರು.

ಉಪಮುಖ್ಯಮಂತ್ರಿ ಹಾಗೂ ಸಾರಿಗೆ, ಕೃಷಿ ಮತ್ತು ರೇಷ್ಮೆ ಸಚಿವ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಪಶು ಸಂಗೋಪನೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಸಚಿವರಾದ ಪ್ರಭು ಬಿ. ಚವ್ಹಾಣ್ ಸೇರಿದಂತೆ ಮತ್ತಿತರ ಹಿರಿಯ ಗಣ್ಯರು, ಅಧಿಕಾರಿಗಳು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

# Online registration of volunteers for enumeration of Trees

Bengaluru, December 12th (Karnataka Information)

BBMP Bengaluru has awarded a time bound Research Prject ‘Enumeration and risk assessment of trees in the area under BBMP for period of 3 years. This projet will be executed by Institute of Wood Science and Technology, 18th cross, Malleshwaram, Bengaluru. this project involves field work. Data Collection and indentification of the species in different wards under BBMP.

In this view Institute of wood science technology invites volunteers from particular ward having inclination twards nature, college students, lectures, scince students and other persons who can devote their time and energy for this noble cause. Those interestedcn register themselves in website bengalurutreecensus.org few volunteers are trained and provided with manuals, audio visuals as to train others. Mobile app was also be developed feeding collected data and uploading to BBMP server. Volunteers student and other will be awarded certificate after completion of project online registration is open till 31st December says Director Institute of wood science and techonology.

## ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರಾಗಿ ಶ್ರೀಮತಿ ಬಿ.ವಿ.ಗೀತಾ ಪ್ರಮಾಣ ವಚನ ಸ್ವೀಕಾರ

**ಬೆಂಗಳೂರು, ಡಿಸೆಂಬರ್ 12 (ಕರ್ನಾಟಕ ವಾರ್ತೆ)**

ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರಾಗಿ ನೇಮಕವಾಗಿರುವ ಶ್ರೀಮತಿ ಬಿ.ವಿ.ಗೀತಾ ಅವರು ಡಿಸೆಂಬರ್ 16 ರಂದು ಮಧ್ಯಾಹ್ನ 12.00 ಗಂಟೆಗೆ ಬೆಂಗಳೂರಿನ ರಾಜಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಕರ್ನಾಟಕ ಗೌರವಾನ್ವಿತ ರಾಜ್ಯಪಾಲ ಶ್ರೀ ವಜೂಭಾಯಿ ವಾಲಾ ಅವರು ಅಧಿಕಾರ ಪ್ರಮಾಣ ವಚನ ಬೋಧಿಸುವರು ಎಂದು ಪ್ರಕಟಣೆ ತಿಳಿಸಿದೆ.

## "ವಿಶ್ವ ಮಣ್ಣು ದಿನಾಚರಣೆ"

**ಬೆಂಗಳೂರು, ಡಿಸೆಂಬರ್ 12 (ಕರ್ನಾಟಕ ವಾರ್ತೆ)**

ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ವತಿಯಿಂದ "ವಿಶ್ವ ಮಣ್ಣು ದಿನಾಚರಣೆ" ಕಾರ್ಯಕ್ರಮವನ್ನು ಡಿಸೆಂಬರ್ 13 ರಂದು ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ನಾರ್ತ್ ಬ್ಲಾಕ್ ಆವರಣ, ಜಿಕೆವಿಕೆ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ರಾಜೇಂದ್ರ ಪ್ರಸಾದ್ ಅವರು ನೆರವೇರಿಸಲಿದ್ದಾರೆ.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯ ನಿವೃತ್ತ ಶಿಕ್ಷಣ ನಿರ್ದೇಶಕರಾದ ಡಾ. ಎಸ್. ಜಿ. ಪಾಟೀಲ್ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಡಾ. ಎ.ಜಿ. ಶಂಕರ್, ಡೀನ್ ಸ್ನಾತಕೋತ್ತರ ಮತ್ತು ಪ್ರೊ. ಕೆ.ಪಿ. ಚಿನ್ನಸ್ವಾಮಿ, ನೋಡಲ್ ಅಧಿಕಾರಿ, ಪ್ರಾಯೋಜನೆ ಮತ್ತು ಮೇಲ್ವಿಚಾರಣೆ ಘಟಕ. ಇವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಡಾ ಡಿ. ಎಲ್. ಸಾವಿತ್ರಮ್ಮ, ಡೀನ್ (ಕೃಷಿ) ಕೃಷಿ ಮಹಾವಿದ್ಯಾನಿಲಯ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

# ಡಿಸೆಂಬರ್ 16 ರಂದು

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಫೋನ್ ಇನ್ ಕಾರ್ಯಕ್ರಮ

**ಬೆಂಗಳೂರು, ಡಿಸೆಂಬರ್ 12 (ಕರ್ನಾಟಕ ವಾರ್ತೆ)**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಶ್ರೀ ಎಸ್. ಸುರೇಶ್ ಕುಮಾರ್ ಅವರು ಡಿಸೆಂಬರ್ 16 ರ ಸೋಮವಾರದಂದು ಸಂಜೆ 5.00 ರಿಂದ 6.30 ಗಂಟೆವರೆಗೆ ಡಿಎಸ್ಇಆರ್‌ಟಿಯಲ್ಲಿ ಸಂವೇದನಾ ಫೋನ್‌ಇನ್ 2ನೇ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಫೋನ್ ಸಂಖ್ಯೆ 080–26725654 ಮತ್ತು 080 – 26725655 ಮೂಲಕ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರೊಂದಿಗೆ ನೇರವಾಗಿ ಮಾತನಾಡಿ ಅಹವಾಲು/ಸಲಹೆ/ಸೂಚನೆಗಳನ್ನು ಹೇಳಿಕೊಳ್ಳಬಹುದಾಗಿದೆ.

ಈ ಬಾರಿ ವಿಶೇಷವಾಗಿ ಮಕ್ಕಳಿಗಾಗಿ ಫೋನ್ ಇನ್ ಕಾರ್ಯಕ್ರಮದಲ್ಲಿ ಹೆಚ್ಚಿನ ಆದ್ಯತೆ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭಾಗವಹಿಸುವ ಮೂಲಕ ಸಚಿವರೊಂದಿಗೆ ಮಾತನಾಡಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ವಿದ್ಯುತ್ ಸರಬರಾಜು ಕಂಪನಿಗಳ ಆನ್‌ಲೈನ್ ಸೇವೆಗಳಲ್ಲಿ ವ್ಯತ್ಯಯ

**ಬೆಂಗಳೂರು, ಡಿಸೆಂಬರ್ 12 (ಕರ್ನಾಟಕ ವಾರ್ತೆ)**

ತುರ್ತು ನಿರ್ವಹಣಾಕಾರ್ಯನಿಮಿತ್ತ, ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಗಳ ಆನ್‌ಲೈನ್ ಸೇವೆಗಳಾದ ವಿದ್ಯುತ್ ಬಿಲ್ಲುಗಳ ಪಾವತಿ, ಹೊಸ ಸಂಪರ್ಕ ಸೇವೆಗಳು ಇತ್ಯಾದಿ ದಿನಾಂಕ : 13-12-2019ರರಾತ್ರಿ9.00ಗಂಟೆಯಿಂದ15-12-2019ರ ಸಂಜೆ6.00ಗಂಟೆಯವರೆಗೆ ನಗರ ಪ್ರದೇಶದ ಗ್ರಾಹಕರಿಗೆ ಲಭ್ಯವಿರುವುದಿಲ್ಲ.

ಬೆಂಗಳೂರು ವಿದ್ಯುತ್ ಸರಬರಾಜುಕಂಪನಿಯ ಈ ಕೆಳಕಂಡ ನಗರ ಉಪವಿಭಾಗದ ಗ್ರಾಹಕರಿಗೆ ಮೇಲೆ ತಿಳಿಸಿರುವ ಆನ್ ಲೈನ್ ಸೇವೆಗಳು ಸದರಿ ಅವಧಿಯಲ್ಲಿ ಲಭ್ಯವಿರುವುದಿಲ್ಲ;

ಬೆಂಗಳೂರು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಕೋಲಾರ, ಚಿಂತಾಮಣಿ, ಕನಕಪುರ, ರಾಮನಗರ, ದಾವಣಗೆರೆ–1, ದಾವಣಗೆರೆ–2,ಚಿತ್ರದುರ್ಗ, ತುಮಕೂರು–1, ತುಮಕೂರು–2, ಸಿರಾ, ಚೆನ್ನಪಟ್ಟಣ, ಅನೇಕಲ್, ಮುಳುಬಾಗಿಲು, ಬಂಗಾರಪೇಟೆ, ಹೊಸಕೋಟೆ, ದೊಡ್ಡಬಳ್ಳಾಪುರ, ಕೆ.ಜಿ.ಎಫ್, ಚಳ್ಳಕೆರೆ, ಕುಣಿಗಲ್, ಹರಪ್ಪನಹಳ್ಳಿ, ಹರಿಹರ, ಹಿರಿಯೂರು ಮತ್ತುತಿಪಟೂರು.

ಗ್ರಾಹಕರಿಗೆ ಆಗುವ ಅನಾನುಕೂಲಕ್ಕಾಗಿ ವಿಷಾದಿಸಲಾಗಿದ್ದು, ಅವರ ಸಹಕಾರವನ್ನುಕೋರಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಬೆಳೆ ವಿಮೆ : ಒಂದು ದಿನದ ಕಾರ್ಯಾಗಾರ

**ಬೆಂಗಳೂರು, ಡಿಸೆಂಬರ್ 12 (ಕರ್ನಾಟಕ ವಾರ್ತೆ)**

ವಿವಿಧ ಬೆಳೆ ವಿಮಾ ಯೋಜನೆಗಳ ವಿವಿಧ ಭಾಗೀದಾರರರಾದ ರೈತರು, ವಿಮಾ ಕಂಪನಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಿ ಅಧಿಕಾರಿಗಳು, ಬ್ಯಾಂಕುಗಳು ಮತ್ತಿತರ ತಜ್ಞರೊನ್ನೊಳಗೊಂಡ ಒಂದು ದಿನದ ಕಾರ್ಯಾಗಾರವನ್ನು **ದಿನಾಂಕ: 13.12.2019ರಂದು ಶುಕ್ರವಾರ ಪೂರ್ವಾಹ್ನ 09.30 ಗಂಟೆಗೆ** ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಾಗಾರವನ್ನು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, ಕರ್ನಾಟಕ ಕೃಷಿ ಬೆಲೆ ಆಯೋಗ ಮತ್ತು ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಜಂಟಿ ಸಹಯೋಗದಲ್ಲಿ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಈ ಕಾಯಾಗಾರವನ್ನು **ಶ್ರೀ.ಜೆ.ಸಿ.ಮಾಧುಸ್ವಾಮಿ ರವರು,** ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಉದ್ಘಾಟಿಸುವರು

ಈ ಕಾರ್ಯಾಗಾರಕ್ಕೆ, **ಡಾ. ಅಶೋಕ್ ದಳವಾಯಿ,** ಭಾ.ಅ.ಸೇ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ರಾಷ್ಟ್ರೀಯ ಮಳೆ ಆಶ್ರಿತ ಕೃಷಿ ಪ್ರಾಧಿಕಾರ (ಓಖಂಂ) ನವದೆಹಲಿ, ಭಾರತ ಸರ್ಕಾರ ಹಾಗೂ **ಡಾ.ಆಶಿಶ್ ಕುಮಾರ್ ಭೂತಾನಿ,** ಮುಖ್ಯ ಕಾರ್ಯ ನಿರ್ವಾಹಣಾ ಅಧಿಕಾರಿ ಹಾಗೂ ಜಂಟಿ ಕಾರ್ಯದರ್ಶಿಗಳು (ಪಿಎಂಎಫ್‌ಬಿವೈ) ಭಾರತ ಸರ್ಕಾರ ನವದೆಹಲಿ ಇವರು ವಿಶೇಷ ಆಹಾನ್ವಿತರಾಗಿರುತ್ತಾರೆ.



Hon'ble Minister Shri. Prabhu Chauhan, Administrator Karnataka State Board of Auqaf, Shri. A.B. Ibrahim I.A.S.and Chief Executive Officer Shri. Islahuddin Gadyal K.A.S. are seen.